## ಕರ್ನಾಟಕ ಲೋಕಾಯುಕ್ತ

ನಂ. ಕಂಪ್ಲೆಂಟ್/ಉಪಲೋಕ್/ಎಂವೈಎಸ್/1183/2021
ಮಂಡನಾಧಿಕಾರಿಗಳ ಶಾಖೆ, ಪಿ.ಒ. ಎ.ಆರ್.ಇ.17 ಬಹುಮಹಡಿಗಳ ಕಟ್ಟಡ,
ಡಾ: ಅಂಬೇಡ್ಕರ್ ವೀದಿ, ಬೆಂಗಳೂರು,
ದಿನಾಂಕ: 18/11/2021

### ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 12(3)ರ ಅನ್ವಯ ವರದಿ

*****

ವಿಷಯ: ಸರ್ಕಾರಿ ನೌಕರರಾದ ದಕ್ಷಿಣ ಕನ್ನಡ ಜಿಲ್ಲೆ, ಬಂಟವಾಳ ತಾಲ್ಲೂಕು, ಪುಣಚ ಗ್ರಾಮ ಪಂಚಾಯತದಲ್ಲಿ ಗ್ರಾಮ ಲೆಕ್ಕಾಧಿಕಾರಿಯಾದ ಶ್ರೀ ಕೆ.ಆರ್. ರಂಜೀತ್, ತಂದೆ ದಿ: ಪಿ. ರವೀಂದ್ರನ್ ನಾಯರ್ ರವರು ಕರ್ತವ್ಯ ಲೋಪ/ದುರ್ನಡತೆ ಎಸಗಿರುವ ಬಗ್ಗೆ.

*****

1) ಪೋಲೀಸ್ ಅಧೀಕ್ಷಕರು, ಭ್ರಷ್ಟಾಚಾರ ನಿಗ್ರಹ ದಳ, ದಕ್ಷಿಣ ಕನ್ನಡ ಜಿಲ್ಲೆ ಇವರು ದಕ್ಷಿಣ ಕನ್ನಡ ಜಿಲ್ಲೆಯ ಭ್ರಷ್ಟಾಚಾರ ನಿಗ್ರಹ ದಳ ಪೋಲೀಸ್ ಠಾಣೆಯ ಪೋಲೀಸ್ ನಿರೀಕ್ಷಕರು (ಇನ್ನು ಮುಂದೆ ತನಿಖಾಧಿಕಾರಿ ಎಂದು ಕರೆಯಲ್ಪಡುತ್ತಾರೆ.) ಸಲ್ಲಿಸಿದ ತನಿಖಾ ವರದಿ ಮತ್ತು ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಿದಾಗ ವರದಿಯಲ್ಲಿ ಶ್ರೀ ಕೆ.ಆರ್. ರಂಜೀತ್, ತಂದೆ ದಿ: ಪಿ. ರವೀಂದ್ರನ್ ನಾಯರ್ (ಇನ್ನು ಮುಂದೆ 'ಎದುರುದಾರರು' ಎಂದು ಕರೆಯಲ್ಪಡುತ್ತಾರೆ.) ದೂರುದಾರರಾದ ಶ್ರೀ ನಾಗರಾಜ ಭಟ್ ಬಿನ್ ಸುಬ್ರಮಣ್ಯ ಭಟ್, ವಾಸ: ಕಂಬಳಿ ಮೂಲೆ, ಪುಣಚ ಗ್ರಾಮ, ಬಂಟ್ವಾಳ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ಇವರು ಎದುರುದಾರರನ್ನು ಭೇಟಿ ಮಾಡಿದಾಗ ಲಂಚದ ಹಣಕ್ಕೆ ಬೇಡಿಕೆ ಇಟ್ಟು ಅದನ್ನು ಪಡೆದು ದುರ್ನಡತೆ ತೋರಿಸಿರುವುದು ಮೇಲ್ನೋಟಕ್ಕೆ ಕಂಡುಬಂದಿದ್ದರಿಂದ ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 7(2) ರನ್ವಯ

ಗೌರವಾನ್ವಿತ ಉಪಲೋಕಾಯುಕ್ತರವರು ಸ್ವಯಂ ಪ್ರೇರಿತ ತನಿಖೆ ಕೈಗೊಂಡಿರುತ್ತಾರೆ.

2) ದೂರಿನ ಸಂಕ್ಷಿಪ್ತ ವಿವರಣೆ:-

i. ದೂರುದಾರರು ಪುಣಚ ಗ್ರಾಮದ ಸರ್ವೆ ನಂ. 708-1ಎ-1ಎ-1ಸಿ ರಲ್ಲಿ 2.10 ಎಕರೆ ವಿಸ್ತೀರ್ಣದ ಭೂಮಿಯನ್ನು ಶ್ರೀ ಶಂಕರನಾರಾಯಣ ಭಟ್ ರವರಿಂದ ಖರೀದಿಸಿದ್ದು, ಸದರಿ ಜಮೀನಿನ ಖಾತೆ ಬದಲಾವಣೆಗೆ ಶಿಫಾರಸ್ಸು ಮಾಡಲು ಆರ್. ಐ. ಮತ್ತು ತಹಶೀಲ್ದಾರ್‌ರವರಿಂದ ಕೆಲಸ ಮಾಡಿಕೊಡಲು ಪುಣಚ ಗ್ರಾಮದ, ಗ್ರಾಮ ಲೆಕ್ಕಾಧಿಕಾರಿ ಶ್ರೀ ಕೆ.ಆರ್. ರಂಜೀತ್, ತಂದೆ ದಿ: ಪಿ. ರವೀಂದ್ರನ್ ನಾಯರ್, ಗ್ರಾಮ ಲೆಕ್ಕಾಧಿಕಾರಿ, ಪುಣಚ ಗ್ರಾಮ ಪಂಚಾಯತ, ಬಂಟವಾಳ ತಾಲ್ಲೂಕ, ದಕ್ಷಿಣ ಕನ್ನಡ ಜಿಲ್ಲೆ (ಇನ್ನು ಮುಂದೆ ಎದುರುದಾರರು ಎಂದು ಉಲ್ಲೇಖಿಸಲಾಗುವುದು)ರವರು ದಿನಾಂಕ 07/05/2016 ರಂದು ದೂರುದಾರರ ಅಣ್ಣನಾದ ನರಸಿಂಹ ಪ್ರಸಾದ ಭಟ್‌ರವರಲ್ಲಿ ರೂಪಾಯಿ 6,000/-ಗಳ ಲಂಚದ ಹಣದ ಬೇಡಿಕೆ ಇಟ್ಟಿರುತ್ತಾರೆ. ಈ ಬಗ್ಗೆ ಧ್ವನಿ ಮುದ್ರಣ ಮಾಡಿಕೊಂಡಿದ್ದು ಇರುತ್ತದೆ. ಸದರಿ ಲಂಚದ ಹಣ ಎದುರುದಾರರಿಗೆ ನೀಡಲು ಇಷ್ಟವಿಲ್ಲದ ಕಾರಣ ದೂರುದಾರರು ದಕ್ಷಿಣ ಕನ್ನಡ ಜಿಲ್ಲೆ ಎ.ಸಿ.ಬಿ. ಪೋಲೀಸ್ ಠಾಣೆಗೆ ರೆಕಾರ್ಡ್ ಮಾಡಿದ ಸಂಭಾಷಣೆಯೊಂದಿಗೆ ದೂರನ್ನು ನೀಡಿರುತ್ತಾರೆ. ಈ ಬಗ್ಗೆ ದಕ್ಷಿಣ ಕನ್ನಡ ಎ.ಸಿ.ಬಿ. ಠಾಣೆಯ ಅಧಿಕಾರಿಗಳು ದೂರನ್ನು ಪಡೆದು ತಮ್ಮ ಠಾಣೆಯ ಗುನ್ನೆ ನಂ. 01/2016 ರಲ್ಲಿ ಪ್ರಕರಣ ನೋಂದಾಯಿಸಿಕೊಂಡಿರುತ್ತಾರೆ.

ii. ತನಿಖಾಧಿಕಾರಿಗಳು ದಿನಾಂಕ 18/05/2016 ರಂದು ನೆರಳು ಸಾಕ್ಷಿ ಹಾಗೂ ಸಹ ಪಂಚರನ್ನು ಬರ ಮಾಡಿಕೊಂಡು ದೂರುದಾರರನ್ನು ಪರಿಚಯಿಸಿ ಅವರಿಂದ ದೂರಿನ ವಿಷಯವನ್ನು ತಿಳಿದ ನಂತರ ವಾಯ್ಸ್ ರೆಕಾರ್ಡರ್‌ನಲ್ಲಿ ರೆಕಾರ್ಡ್ ಮಾಡಿದ ಸಂಭಾಷಣೆಯನ್ನು ಸಿ.ಡಿ.ಗೆ ವರ್ಗಾಯಿಸಿಕೊಂಡು ದೂರನ್ನು ಸಲ್ಲಿಸಿದ್ದು ಸದರಿ ಸಿ.ಡಿ.ಯನ್ನು ಪಂಚರಿಗೆ

ಕೇಳಿಸಿ, ಲಿಪಿಕರಣ ಮಾಡಿ ವಶಪಡಿಸಿಕೊಂಡಿರುತ್ತಾರೆ. ನಂತರ ಲಂಚದ ಹಣ ರೂ. 6,000/- ದೂರುದಾರರು ಹಾಜರುಪಡಿಸಿದ್ದು ಅವುಗಳ ಮುಖಬೆಲೆ ಮತ್ತು ನೋಟಿನ ಸಂಖ್ಯೆ ಪ್ರತ್ಯೇಕ ಹಾಳೆಯಲ್ಲಿ ನಮೂದಿಸಿ ಪಂಚರ ಮತ್ತು ತನಿಖಾಧಿಕಾರಿಗಳ ಸಹಿ ಪಡೆಯಲಾಯಿತು. ಸದರಿ ಹಣಕ್ಕೆ ಪಿನಾಪ್ತಲಿನ್ ಪೌಡರ್ ಲೇಪಿಸಿ ಸೋಡಿಯಂ ಕಾರ್ಬೋನೇಟ್ ದ್ರಾವಣ ತಯಾರಿಸಿ ಸದರಿ ದ್ರಾವಣದಲ್ಲಿ ನೋಟುಗಳಿಗೆ ಪಿನಾಪ್ತಲಿನ್ ಪೌಡರ್ ಲೇಪಿಸಿದ ಪಂಚನ ಕೈ ಬೆರಳುಗಳನ್ನು ದ್ರಾವಣದಲ್ಲಿ ಅದ್ದಿ ತೆಗೆದಾಗ ಅದು ತಿಳಿ ಗುಲಾಬಿ ಬಣ್ಣಕ್ಕೆ ಬಂದಿರುತ್ತದೆ. ಈ ಬಗ್ಗೆ ಮಾದರಿ ದ್ರಾವಣ ಹಾಗೂ ಗುಲಾಬಿ ಬಣ್ಣಕ್ಕೆ ತಿರುಗಿದ ದ್ರಾವಣವನ್ನು ಪ್ರತ್ಯೇಕವಾಗಿ ವಶಪಡಿಸಿಕೊಂಡು ಹಂತ ಹಂತವಾಗಿ ಫೋಟೋಗಳನ್ನು ತೆಗೆಸಿ ಪ್ರಕರಣದ ಮಾಹಿತಿ ಗೌಪ್ಯತೆಯನ್ನು ಕಾಪಾಡಿಕೊಳ್ಳಲು ತನಿಖಾಧಿಕಾರಿ ರವರು ಸೂಚಿಸಿರುತ್ತಾರೆ. ಶ್ರೀ ಧನಂಜಯ್ ಎಂ. ತಂದೆ ನರಸಿಂಹ ಪ್ರಭು, ಕಿರಿಯ ತರಬೇತಿ ಅಧಿಕಾರಿ, ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ, ಕದ್ರಿ ಹಿಲ್ಸ್, ಮಂಗಳೂರು ಇವರನ್ನು ನೆರಳು ಸಾಕ್ಷಿಯಾಗಿ ನೇಮಿಸಿ ದೂರುದಾರರೊಂದಿಗೆ ಎದುರುದಾರರ ಬಳಿ ಹೋಗಿ ಅವರಿಗೆ ಅನುಮಾನ ಬಾರದಂತೆ ಮತ್ತು ಎದುರುದಾರರು ಹಾಗೂ ದೂರುದಾರರ ನಡುವೆ ನಡೆದ ಸಂಭಾಷಣೆಯನ್ನು ಕೇಳಿಸಿಕೊಂಡು ಘಟನೆಯನ್ನು ವೀಕ್ಷಿಸಿ, ಎದುರುದಾರರು ಹಣವನ್ನು ಕೇಳಿ ಪಡೆದುಕೊಂಡರೆ, ಹಣವನ್ನು ಹೇಗೆ ಪಡೆದುಕೊಳ್ಳುತ್ತಾರೆ, ಹಣವನ್ನು ಎಲ್ಲಿ ಇಟ್ಟುಕೊಳ್ಳುತ್ತಾರೆ ಎಂಬುದನ್ನು ಗಮನಿಸಿ ನಂತರ ತಿಳಿಸಬೇಕೆಂದು ತನಿಖಾಧಿಕಾರಿಗಳು ನೀಡಿದ ವಾಯ್ಸ್ ರೆಕಾರ್ಡರ್‌ನಲ್ಲಿ ಧ್ವನಿ ಸಂಭಾಷಣೆಯನ್ನು ರೆಕಾರ್ಡ್ ಮಾಡಲು ದೂರುದಾರರಿಗೆ ತಿಳಿಸಿರುತ್ತಾರೆ. ದೂರುದಾರರಿಗೆ ಎದುರುದಾರರು ಲಂಚದ ಹಣ ಬೇಡಿಕೆ ಇಟ್ಟು ಸ್ವೀಕರಿಸಿದ ನಂತರ ತನ್ನ ಬಲಗೈಯಿಂದ ತಲೆ ಕೂದಲನ್ನು ಸವರಿಕೊಳ್ಳುವುದರ ಮೂಲಕ ಸೂಚನೆ ನೀಡಬೇಕೆಂದು ಸೂಚಿಸಿರುತ್ತಾರೆ. ಈ ಬಗ್ಗೆ ಸವಿಸ್ತಾರ ಪ್ರಾಯೋಗಿಕ ಪಂಚನಾಮೆಯನ್ನು ನಿರ್ವಹಿಸಿರುತ್ತಾರೆ.

iii. ದೂರುದಾರರು ಪಂಚ ಸಾಕ್ಷಿಗಳು, ಸಿಬ್ಬಂಧಿಯವರೊಂದಿಗೆ ತನಿಖಾಧಿಕಾರಿಗಳು ಗ್ರಾಮಲೆಕ್ಕಾಧಿಕಾರಿಯವರ ಕಛೇರಿಯ ಒಳಗೆ ಬಂದು, ಎದುರುದಾರರನ್ನು ಭೇಟಿ ಮಾಡಿದಾಗ ದೂರುದಾರರಿಗೆ "ನಿಮ್ಮ ಕೆಲಸ ಆಗಿದೆ ಭತ್ರೆ ಉಳಿದ ಕೆಲಸ ಬಾಕಿ ಇದೆ" ಎಂದಾಗ ದೂರುದಾರರು 6,000/- ರೂಪಾಯಿ ಲಂಚದ ಹಣವನ್ನು ನೀಡಿದಾಗ ಎದುರುದಾರರು ಹಣವನ್ನು ಎಣಿಸಿ "ಇದು ಸಾಕಾಗಲ್ಲ" ಎಂದಾಗ ದೂರುದಾರರ ಅಣ್ಣನ ಬಳಿ 500/- ರೂಪಾಯಿಗಳನ್ನು ಹೆಚ್ಚುವರಿಯಾಗಿ ಪಡೆದು ನೀಡಿದಾಗ ಎದುರುದಾರರು ಹಣವನ್ನು ಎಣಿಸಿ ಎದುರುದಾರರ ಶರ್ಟಿನ ಎಡ ಜೇಬಿನಲ್ಲಿ ಇಟ್ಟುಕೊಂಡಿದ್ದು ಇರುತ್ತದೆ. ಕಛೇರಿಯ ಬಾಗಿಲ ಬಳಿ ಬಂದು ದೂರುದಾರರು ತನ್ನ ಬಲಗೈಯಿಂದ ತಲೆ ಕೂದಲನ್ನು ಸವರುವದರ ಮೂಲಕ ತನಿಖಾಧಿಕಾರಿಗಳಿಗೆ ನಿಗಧಿತ ಸೂಚನೆ ನೀಡಿರುತ್ತಾರೆ. ಪಂಚ ಸಾಕ್ಷಿಗಳು, ಸಿಬ್ಬಂಧಿಯವರೊಂದಿಗೆ ತನಿಖಾಧಿಕಾರಿಗಳು ಬಳಿ ದೂರುದಾರರು ಮತ್ತು ನೆರಳು ಸಾಕ್ಷಿ ಧನಂಜಯ ಎಂ. ತಂದೆ ನರಸಿಂಹ ಪ್ರಭು ಇವರ ಜೊತೆ ಎದುರುದಾರರಿಂದ ಪಿನಾಪ್ತಲಿನ್ ಪುಡಿ ಲೇಪಿತ ರೂ. 6,000/- ಲಂಚದ ಹಣವನ್ನು ಮತ್ತು ಹೆಚ್ಚುವರಿಯಾಗಿ ರೂ. 500/-ನ್ನು ನೀಡಿದಾಗ ಎದುರುದಾರರು ಹಣವನ್ನು ಎಣಿಸಿ ಅವರು ಧರಿಸಿದ್ದ ಶರ್ಟಿನ ಎಡ ಜೇಬಿಗೆ ಹಾಕಿಕೊಂಡರು. ತನಿಖಾಧಿಕಾರಿಯವರು ಪಂಚರ ಸಮಕ್ಷಮ ಎದುರುದಾರರು ತಾನು ಧರಿಸಿದ್ದ ಶರ್ಟಿನ ಎಡಭಾಗದ ಜೇಬಿನಲ್ಲಿದ್ದ ಪಿನಾಪ್ತಲಿನ್ ಪೌಡರ್ ಲೇಪಿತ ಹಣ ರೂ. 6,000/- ಹಾಗೂ ಹೆಚ್ಚುವರಿ ಹಣ ರೂ. 500/- ನ್ನು ಹಾಜರುಪಡಿಸಿದ್ದು ಸದರಿ ಪಿನಾಪ್ತಲಿನ್ ಪೌಡರ್ ಲೇಪಿತ ನೋಟುಗಳ ಮೌಲ್ಯ ನೋಟುಗಳ ನಂಬರ್ ಪ್ರಾಯೋಗಿಕ ಪಂಚನಾಮೆಯಲ್ಲಿ ಬರೆದಂತಹ ನೋಟುಗಳ ನಂಬರಿಗೂ ಮೌಲ್ಯಕ್ಕೂ ತಾಳೆಯಾಗಿದ್ದು ಇರುತ್ತದೆ. ಸದರಿ ಲಂಚದ ಹಣವಾದ 6,500/-ರೂ.ಗಳನ್ನು ಎದುರುದಾರರಿಂದ ಅಮಾನತ್ತು ಪಡಿಸಿಕೊಂಡಿರುತ್ತಾರೆ. ತನಿಖಾಧಿಕಾರಿಯವರು ಎದುರುದಾರರ ಬಲಗೈ ಬೆರಳುಗಳನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿ

ತೊಳೆದಾಗ ದ್ರಾವಣವು ತಿಳಿ ಗುಲಾಬಿ ಬಣ್ಣಕ್ಕೆ ಬದಲಾವಣೆಯಾಗಿರುತ್ತದೆ. ಅದೇ ರೀತಿ ನಿಮ್ಮ ಎಡಗೈ ಬೆರಳುಗಳನ್ನು ಇನ್ನೊಂದು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿ ತೊಳೆದಾಗ ದ್ರಾವಣವು ತಿಳಿ ಗುಲಾಬಿ ಬಣ್ಣಕ್ಕೆ ಬದಲಾವಣೆಯಾಗಿರುತ್ತದೆ. ಎದುರುದಾರರಿಗೆ ಬೇರೆ ಶರ್ಟಿನ ವ್ಯವಸ್ಥೆ ಮಾಡಿ ಆತನು ಧರಿಸಿದ್ದ ಶರ್ಟನ್ನು ಬಿಚ್ಚಿಸಿ ಸದರಿ ಶರ್ಟಿನ ಎಡಭಾಗದ ಜೇಬನ್ನು ಹೊರಭಾಗಕ್ಕೆ ತೆಗೆದು ಅದನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿ ತೊಳೆದಾಗ ದ್ರಾವಣವು ತಿಳಿ ಗುಲಾಬಿ ಬಣ್ಣಕ್ಕೆ ಬದಲಾವಣೆಯಾಗಿರುತ್ತದೆ. ಸದರಿ ಶರ್ಟನ್ನೂ ಸಹ ತನಿಖಾಧಿಕಾರಿಯವರು ಪಂಚರ ಸಮಕ್ಷಮ ಅಮಾನತ್ ಪಡಿಸಿಕೊಂಡಿರುತ್ತಾರೆ. ದೂರುದಾರರು ಪಂಚ ಸಾಕ್ಷಿಗಳು, ಸಿಬ್ಬಂದಿ ರವರೊಂದಿಗೆ ತನಿಖಾಧಿಕಾರಿಗಳು ನೆರಳು ಸಾಕ್ಷಿ ಶ್ರೀ ಧನಂಜಯ ಎಂ ತಂದೆ ನರಸಿಂಹ ಪ್ರಭು, ಸಹ ಪಂಚ ಅವರಿಂದ ಅಲ್ಲಿಯ ನಡುವಳಿಕೆಗಳನ್ನು ತಿಳಿದು ಸವಿಸ್ತಾರ ಜಪ್ತಿ ಪಂಚನಾಮೆ ನಿರ್ವಹಿಸಿ, ದೂರುದಾರರ ಹಾಗೂ ಪಂಚರ ಸಮಕ್ಷಮ ಸದರಿ ಹಣ, ಮುದ್ದೆ ಮಾಲುಗಳನ್ನು ಹಾಗೂ ಪ್ರಕರಣಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ತನಿಖಾಧಿಕಾರಿಗಳು ವಶಪಡಿಸಿ ಕೊಂಡಿರುತ್ತಾರೆ. ಎದುರುದಾರರ ಮೇಲಾಧಿಕಾರಿ ಹಾಗೂ ಕಂದಾಯ ನಿರೀಕ್ಷಕರಾದ ಶ್ರೀ ದಿವಾಕರರವರಿಗೆ ವಾಯ್ಸ್ ರೆಕಾರ್ಡರ್‌ನಲ್ಲಿದ್ದ ಸಂಭಾಷಣೆಗಳನ್ನು ಕೇಳಿಸಿದ್ದು ಅವರು ಅವುಗಳನ್ನು ಕೇಳಿ ಆ ಸಂಭಾಷಣೆಯಲ್ಲಿದ್ದ ಒಂದು ಧ್ವನಿಯನ್ನು ಗ್ರಾಮ ಲೆಕ್ಕಾಧಿಕಾರಿ ರಂಜೀತ್‌ರವರದ್ದು ಎಂದು ಗುರ್ತಿಸಿರುತ್ತಾರೆ. ತನಿಖಾಧಿಕಾರಿಯವರು ಸವಿಸ್ತಾರ ಜಪ್ತಿ ಪಂಚನಾಮೆ ಪೂರೈಸಿದ ನಂತರ ಎದುರುದಾರರನ್ನು ದಸ್ತಗಿರಿ ಮಾಡಿರುತ್ತಾರೆ.

iv. ಸದರಿ ಹಣದ ಬಗ್ಗೆ ತನಿಖಾಧಿಕಾರಿಯು ಎದುರುದಾರರಿಗೆ ಸಮಜಾಯಿಷಿ ಕೇಳಲಾಗಿ ಅವರು ತಮ್ಮ ಸಮಜಾಯಿಷಿಯಲ್ಲಿ "ನಾನು ಖರೀದಿದಾರರಿಂದ ಯಾವುದೇ ರೀತಿಯಲ್ಲಿ ಹಣ ಕೇಳಿರುವುದಿಲ್ಲ.

ಈಗಾಗಲೇ ಸದ್ರಿ ಕಡತವನ್ನು ತಾಲ್ಲೂಕು ಕಛೇರಿಯ ಭೂಮಿ ಶಾಖೆಗೆ ಸಲ್ಲಿಸಿದ್ದು ಪಹಣಿ ದಾಖಲಾಗಲು ಬಾಕಿ ಇರುತ್ತದೆ. ನಾನು ಹಣ ಕೇಳಿರುವುದು ಸತ್ಯಕ್ಕೆ ದೂರವಾಗಿರುವುದರಿಂದ ಹಾಗೂ ಈ ದಿನ ಸದರಿ ಕಡತದಲ್ಲಿನ ಖರೀದಿದಾರರು ನನ್ನನ್ನು ಉದ್ದೇಶಪೂರ್ವಕವಾಗಿ ನನ್ನ ಕೈಗೆ ಬಲವಂತವಾಗಿ ಹಣ ನೀಡಿ ತಮ್ಮ ಮೂಲಕ ನನ್ನನ್ನು ಹಿಡಿಸಿರುತ್ತಾರೆ. ಪಹಣಿ ದಾಖಲಾಗಲು ಬಾಕಿ ಇರುವುದರಿಂದ ನನ್ನನ್ನು ಸುಳ್ಳು ಆರೋಪದಿಂದ ಮುಕ್ತಗೊಳಿಸಬೇಕಾಗಿ ಕೋರುತ್ತೇನೆ." ಎಂದು ಲಿಖಿತ ಸಮಜಾಯಿಷಿ ನೀಡಿರುತ್ತಾರೆ. ಆದರೆ ಸದರಿ ಸಮಜಾಯಿಷಿ ಸಕಾರಾತ್ಮಕವಾಗಿರುವುದಿಲ್ಲ. ಸದರಿಯವರು ಲಂಚದ ಹಣಕ್ಕೆ ಬೇಡಿಕೆ ಇಟ್ಟ ಬಗ್ಗೆ ಮೊಬೈಲ್‌ನಲ್ಲಿ ಮಾತನಾಡಿದ ಸಂಭಾಷಣೆ, ಪಿನಾಪ್ತಲಿನ್ ಪೌಡರ್ ಲೇಪಿತ ಹಣವನ್ನು ಸ್ವೀಕರಿಸಿದ ಬಗ್ಗೆ ರಾಸಾಯನಿಕ ವಿಶ್ಲೇಷಣಾ ವರದಿಯಿಂದ ದೃಢಪಟ್ಟಿರುತ್ತದೆ.

v. ಧ್ವನಿ ವಿಶ್ಲೇಷಣಾ ವರದಿಯಲ್ಲಿ ಎದುರುದಾರರ ಧ್ವನಿಯೊಂದಿಗೆ ತಾಳೆಯಾಗಿರುವುದು ದೃಢಪಟ್ಟಿರುತ್ತದೆ ಹಾಗೂ ರಾಸಾಯನಿಕ ತಜ್ಞರ ಪರೀಕ್ಷಾ ವರದಿಯಲ್ಲಿ ತನಿಖಾಧಿಕಾರಿಗಳು ಸಂಗ್ರಹಿಸಿದ ಮುದ್ದೇ ಮಾಲುಗಳಲ್ಲಿ ಪಿನಾಪ್ತಲಿನ್ ಅಂಶ ಇರುವುದು ದೃಢಪಟ್ಟಿರುತ್ತದೆ.

vi. ಎದುರುದಾರರು ಪರಿವೀಕ್ಷಣಾ ಟಿಪ್ಪಣಿಗೆ ತಮ್ಮ ಸಮಜಾಯಿಯನ್ನು ದಿನಾಂಕ 19/08/2021 ರಂದು ಸಲ್ಲಿಸಿರುತ್ತಾರೆ. ಸದರಿ ಸಮಜಾಯಿಯನ್ನು ಪರಿಶೀಲಿಸಲಾಗಿ ಎದುರುದಾರರು ತಮ್ಮ ಸಮಜಾಯಿಷಿಯಲ್ಲಿ "ದೂರುದಾರರ ಅಣ್ಣ ಸದರಿ ದಿನ ನನ್ನನ್ನು ಕಛೇರಿಯಲ್ಲಿ ಭೇಟಿಯಾಗಿ ಲಂಚದ ಹಣಕ್ಕೆ ಬೇಡಿಕೆ ಇಟ್ಟ ಬಗ್ಗೆ ಧ್ವನಿ ಮುದ್ರಣ ಮಾಡಿಕೊಂಡಿರುವುದಾಗಿ ಆಪಾದಿಸಿದ್ದು, ಸದರಿಯವರು ಸದರಿ ದಿನ ಕೊಳ್ನಾಡು ಸಾಲೆತ್ತೂರು ಗ್ರಾಮಕ್ಕೆ ಬಂದು ನನ್ನನ್ನು ಭೇಟಿಯಾಗಿರುವುದಿಲ್ಲ. ಪುಣಚಾ ಗ್ರಾಮದ ಕಛೇರಿಯಲ್ಲಿ ಕರ್ತವ್ಯ ನಿರ್ವಹಿಸದ ದಿನ ಬಂದು ಧ್ವನಿ ಮುದ್ರಣ ಮಾಡಿರುವುದಾದರೂ ಹೇಗೆ

ಎಂಬುದು ತಿಳಿದಿರುವುದಿಲ್ಲ. ದೂರುದಾರರು ನಮೂನೆ 21 ರ ನೋಟೀಸಿನಲ್ಲಿ ಸಹಿ ಹಾಕಲು ಬಂದ ದಿನ ನನಗೆ ಹಣದ ಆಮಿಷವನ್ನು ಒಡ್ಡಿದ್ದು ನಾನು ನಿರಾಕರಿಸಿದಾಗ ಬಲವಂತವಾಗಿ ನನ್ನ ಶರ್ಟಿನ ಜೇಬಿಗೆ ಹಣವನ್ನು ಹಾಕಿದ್ದು, ಜೇಬಿನಿಂದ ಸದರಿ ಹಣವನ್ನು ನಾನು ತೆಗೆದು ದೂರುದಾರನಿಗೆ ಹಿಂತಿರುಗಿಸಿರುತ್ತೇನೆ. ದಿ: 19/05/2016 ರಂದು ದೂರುದಾರ ಹಾಗೂ ಅವರ ಅಣ್ಣ ಕಛೇರಿಗೆ ಬಂದು ಖಾತಾ ಬದಲಾವಣೆಗೆ ಕಂದಾಯ ನಿರೀಕ್ಷಕರ ಶಿಫಾರಸ್ಸಿನೊಂದಿಗೆ ನಾನು ಈಗಾಗಲೇ ಸದರಿ ಕಡತವನ್ನು ತಾಲ್ಲೂಕಾ ಕಛೇರಿಗೆ ಕಳುಹಿಸಿರುತ್ತೇನೆ ಎಂಬುದಾಗಿ ನಾನು ತಿಳಿಸಿರುತ್ತೇನೆ. ಹಾಗಿದ್ದಲ್ಲಿ ಇದು ನಿಮಗಿರಲಿ ಎಂದು ಹೇಳುತ್ತಾ ನನ್ನ ಶರ್ಟಿನ ಜೇಬಿಗೆ ಪುನ: ಹಣವನ್ನು ಹಾಕಲು ದೂರುದಾರರು ಪ್ರಯತ್ನಿಸಿದ್ದು ಸದರಿಯವರ ಪ್ರಯತ್ನವನ್ನು ನಾನು ಎರಡೂ ಕೈಗಳಿಂದ ತಡೆಯಲು ಯತ್ನಿಸಿದಾಗ ಆರೋಗ್ಯ ದೃಢಕಾಯರವರಾದ ದೂರುದಾರ ಹಾಗೂ ಅವರ ಅಣ್ಣ ಇಬ್ಬರೂ ಸೇರಿ ಬಲವಂತವಾಗಿ ನನ್ನ ಕೈಗಳಿಗೆ ಹಣವನ್ನು ತುರುಕಿ ಹಿಡಿಸಿರುತ್ತಾರೆ. ನಾನು ಅವರನ್ನು ತಳ್ಳಿ ಹಣವನ್ನು ಕೆಳಗೆ ಹಾಕುತ್ತಿದ್ದಂತೆ ತನಿಖಾಧಿಕಾರಿಗಳು ಕಛೇರಿ ಒಳ ನುಗ್ಗಿ ನನ್ನ ಕೈಗಳನ್ನು ಹಿಡಿದು ಹಣವನ್ನು ಕೆಳಗಿನಿಂದ ತೆಗೆದು ಜೇಬಿನಲ್ಲಿ ಇಟ್ಟುಕೊಳ್ಳಲು ಸೂಚಿಸಿರುತ್ತಾರೆ. ನಾನು ತನಿಖಾಧಿಕಾರಿಗಳನ್ನು ಕಂಡು ಭಯಭೀತನಾಗಿ ದಿಕ್ಕೇ ತೋಚದಂತಾಗಿ ಮುಂದಾಲೋಚನೆ ಮಾಡದೇ ಅವರು ನೀಡಿದ ನಿರ್ದೇಶನದಂತೆ ವರ್ತಿಸಿರುತ್ತೇನೆ" ಎಂದು ಸಮಜಾಯಿಷಿಯನ್ನು ನೀಡಿರುತ್ತಾರೆ. ಸದರಿಯವರ ಸಮಜಾಯಿಷಿಯು ವ್ಯತಿರಿಕ್ತ ಸಮಜಾಯಿಷಿಯಾಗಿದ್ದು ಆಪಾದನೆಗಳನ್ನು ನಿರಾಕರಿಸಿರುವುದರ ಹೊರತಾಗಿ ಆಪಾದನೆಗಳನ್ನು ಅಲ್ಲಗಳೆಯಲು ಯಾವುದೇ ಪೂರಕ ದಾಖಲಾತಿಗಳನ್ನು ಸಲ್ಲಿಸಿರುವುದಿಲ್ಲ. ಆದ್ದರಿಂದ ಅವರು ನೀಡಿರುವ ಸಮಜಾಯಿಷಿ ಅಂಶಗಳ ಮೇರೆಗೆ ಪ್ರಕರಣವನ್ನು ಮುಕ್ತಾಯಗೊಳಿಸಲು ಸೂಕ್ತ ಕಾರಣಗಳು ಕಂಡುಬರುವುದಿಲ್ಲ.

3) ಸಾಕ್ಷಿದಾರರ ಹೇಳಿಕೆಗಳು, ದೂರು ಅರ್ಜಿ ಹಾಗೂ ತನಿಖಾಧಿಕಾರಿ ಸಂಗ್ರಹಿಸಿದ ದಾಖಲೆ ಮತ್ತು ಇತರ ಅಂಶಗಳು, ಎದುರುದಾರರ ಸತತವಾದ ದುರ್ನಡತೆಯನ್ನು ತೋರಿಸುತ್ತದೆ.

4) ಮೇಲ್ಕಂಡ ಅಂಶಗಳು, ಕಡತದ ಸಂಗತಿಗಳು, ದಾಖಲಾತಿಗಳನ್ನು ಮತ್ತು ಎದುರುದಾರರು ನೀಡಿರುವ ಉತ್ತರಗಳನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ, ಸದರಿ ಎದುರುದಾರರು ತಮ್ಮ ವಿರುದ್ಧದ ನಡವಳಿಯನ್ನು ಕೈ ಬಿಡಲು ಸೂಕ್ತ/ಸಮಂಜಸ/ಸಮಾಧಾನಕರ ಕಾರಣ ತೋರಿಸಿಲ್ಲವೆಂದು ಅಭಿಪ್ರಾಯಕ್ಕೆ ಬರಲಾಗಿದೆ.

5) ಕಡತದಲ್ಲಿಯ ಸಂಗತಿಗಳು ಹಾಗೂ ದಾಖಲಾತಿಗಳಿಂದ, ಎದುರುದಾರರು ಸರ್ಕಾರಿ/ಸಾರ್ವಜನಿಕ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಟತೆ ಮತ್ತು ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡ ದುರ್ವರ್ತನೆ/ದುರ್ನಡತೆ ಮೇಲ್ನೋಟಕ್ಕೆ ಕಂಡುಬರುತ್ತದೆ.

6) ಅದಲ್ಲದೆ ಎದುರುದಾರರು ಸರ್ಕಾರಿ ನೌಕರರಾಗಿದ್ದು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ, 1966 ರ (ಪ್ರಸ್ತುತ ಕರ್ನಾಟಕ ನಾಗರಿಕ ಸೇವಾ(ನಡತೆ) 2021 ನಿಯಮ 3 (1) (i) ರಿಂದ (iii) ರ ಅಡಿಯಲ್ಲಿ ದುರ್ನಡತೆ/ದುರ್ವರ್ತನೆ ಕಂಡು ಬರುವುದರಿಂದ, ಸದರಿಯವರ ವಿರುದ್ಧ ಇಲಾಖಾ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3) ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ, ಈ ವರದಿ ಮೂಲಕ ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ ಹಾಗೂ ಎದುರುದಾರರ ವಿರುದ್ಧ ಇಲಾಖಾ ವಿಚಾರಣೆ ಮಾಡಲು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957 ರ ನಿಯಮ 14(ಎ) ರಡಿ ಈ ಸಂಸ್ಥೆಗೆ ವಹಿಸಬೇಕೆಂದೂ ಕೋರಿದೆ.

7) ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4) ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ

ವರದಿಯನ್ನು ಸ್ವೀಕರಿಸಿದ **ಮೂರು ತಿಂಗಳೊಳಗೆ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

2/12/24

(ನ್ಯಾಯಮೂರ್ತಿ ಬಿ.ಎಸ್. ಪಾಟೀಲ್)
ಉಪಲೋಕಾಯುಕ್ತರು
ಕರ್ನಾಟಕ ರಾಜ್ಯ, ಬೆಂಗಳೂರು.